ಇಂದು ದಿಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಬಿ ವಕೀಲರಿಂದಃ

ದಿನಾಂಕ 03.02.2014ರಂದು ಆದ ಪಾಲುಪಟ್ಟಿ ಅಂದರೆ ನಿ ಡಿ 1 ರ ಲಾಗಾಯಿತಿನಿಂದ ನಾವು ಪ್ರತ್ಯೇಕವಾಗಿ ಇದ್ದುಕೊಂಡು ಕೃಷಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ, ಒಟ್ಟಿಗೆ ಬೆಳೆಯುತ್ತಿದ್ದೇವೆ. ನಾನು ನನ್ನ ತಂದೆಗೆ ಸೇರಿದ ಮನೆಯಲ್ಲಿ ಬೇರೆಯೇ ವಾಸ ಇದ್ದೇನೆ ಎಂದರೆ ಸರಿ. 2ನೇ ಪ್ರತಿವಾದಿ ಪ್ರಕಾಶ್ ರವರಿಗೆ ಸರ್ವೆ ನಂ. 278/3 ರಲ್ಲಿ 35 ಗುಂಟೆ ಜಮೀನು ಸೇರಿದೆ ಎಂದರೆ ಸ್ವಾಧೀನ ಇದ್ದಾರೆ ಎನ್ನುತ್ತಾರೆ. ಸರ್ವೆ ನಂ. 120/ಪಿ14 ರಲ್ಲಿ 1 ಎಕರೆ 15 ಗುಂಟೆ ಜಮೀನು ನನ್ನ ಅಣ್ಣ 1ನೇ ಪ್ರತಿವಾದಿ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. ಆ ಆಸ್ತಿಯನ್ನು 2ನೇ ಪ್ರತಿವಾದಿಗೆ ಸೇರಿಸಿ ಈಗ ಅವರು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 1992ರಲ್ಲಿ 4ನೇ ಐಟಂ ಆಸ್ತಿಯನ್ನು ಅವರ ಹೆಸರಿಗೆ ನೊಂದಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದೇ ಆಸ್ತಿಯನ್ನು ಅವರ ಹೆಂಡತಿ ಹೆಸರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗ ಆ ಜಾಗದಲ್ಲಿ ಮನೆ ಕಟ್ಟಿಕೊಂಡು 1ನೇ ಪ್ರತಿವಾದಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿಗಳಾದ ನಾವು ನಮ್ಮ ತಂದೆ ಆಸ್ತಿಯನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದೇವೆ ಎಂದರೆ ಸರಿಯಲ್ಲ. ಪಾಲು ವಿಭಾಗದ ನಂತರ ಖಾತೆ ನನ್ನ ಹೆಸರಿಗೆ ಆಗಿದ್ದರೂ ಸಹ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಪಾಲುಪಟ್ಟಿಯಾಗಿ ವಿಭಾಗವಾದ ಕಾರಣ ದಾವೆಯಲ್ಲಿ ವಿಭಾಗ ಕೇಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.